KAUK010012642021

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

**ಸ್ಪೇಶಲ್ ಕೇಸ ನಂ. 147/2021**

ಫಿರ್ಯಾದಿ – ವಿರುದ್ಧ – ಆರೋಪಿ/ಗಳು

ಭಟ್ಕಳ ಗ್ರಾಮೀಣ ಪೊಲೀಸ ಠಾಣೆ ಇರ್ಷಾದ ಮೊಹಿದ್ದೀನ್ ಸಿದ್ದಿಕ್ಕಾ @ ತುಕಡಾ ಇರ್ಷಾದ್ ತಂದೆ ಮೊಹಮ್ಮದ್ ಇಸ್ಮಾಯಿಲ್

**ದೋಷಾರೋಪಣೆ**

**ಶ್ರೀ ಗಣೇಶ ಬಿ., ಬಿ.ಎಸ್.ಸಿ. ಎಲ್.ಎಲ್.ಎಂ. 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು, ಆರೋಪಿತರಾದಃ**

ಆರೋಪಿ

ಇರ್ಷಾದ ಮೊಹಿದ್ದೀನ್ ಸಿದ್ದಿಕ್ಕಾ @ ತುಕಡಾ ಇರ್ಷಾದ್
ತಂದೆ ಮೊಹಮ್ಮದ್ ಇಸ್ಮಾಯಿಲ್
ಪ್ರಾಯಃ 45 ವರ್ಷ, ಉಃ ವ್ಯಾಪಾರ
ಸಾಃ ಕೆ.ಎಚ್.ಬಿ ಕಾಲೋನಿ, 4 ನೇ ಕ್ರಾಸ್,
ಗಣೇಶ ಹಾರ್ಡವೇರ್ ಶೋಪ್ ಹಿಂಭಾಗ ಭಟ್ಕಳ ತಾಲೂಕು

**ನಿನ್ನ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆಃ**

ದಿನಾಂಕಃ 26.03.2021 ರಂದು ಸಾಯಂಕಾಲ 4.30 ಗಂಟೆಗೆ ಭಟ್ಕಳ ತಾಲೂಕಿನ ಜಾಲಿ ಪಟ್ಟಣ ಪಂಚಾಯತಿಯ ಸಿಬ್ಬಂದಿಯವರು ಕೆ.ಎಚ್.ಬಿ ಕಾಲೋನಿ ಪಾರ್ಕ–2 ನೇದ್ದರ ನಾಮಫಲಕವನ್ನು ತೆರವುಗೊಳಿಸುತ್ತಿದ್ದುದ್ದನ್ನು ಫಿರ್ಯಾದಿ ಇವರು ನೋಡಲು ಹೋದಾಗ ಆರೋಪಿಯಾದ ನೀನು ಪಿರ್ಯಾದಿಯನ್ನು ಉದ್ದೇಶಿಸಿ "ನೀನು ಕಿರಣ ಅಲ್ಲವೇ? ನೀನು ಈ ಬೋರ್ಡಿನ ಬಗ್ಗೆ ತಕರಾರು ಎತ್ತಿರುತ್ತಿಯಾ, ನಿನಗೆ ಈ ಜಾಗದ ಬಗ್ಗೆ ಏನು ಸಂಬಂಧವಿದೆ, ಅಂತಾ ನವಾಯಿತಿ ಭಾಷೆಯಲ್ಲಿ ಕೇಳಿದ್ದು, ಇದಕ್ಕೆ ಪಿರ್ಯಾಧಿಯವರು ತಾನು ಭಾರತದ ಪ್ರಜ್ಞಾವಂತ ಪ್ರಜೆಯಾದ ಕಾರಣ ಈ ಸರಕಾರದ ಜಾಗವನ್ನು ನೀವು ಅತಿಕ್ರಮಣ ಮಾಡಿರುತ್ತೀರಿ ಅಂತಾ ಜಿಲ್ಲಾಧಿಕಾರಿಯವರಿಗೆ ದೂರು ಕೊಟ್ಟಿದ್ದು, ತಮ್ಮಲ್ಲಿ ದಾಖಲೆ ಇದ್ದಲ್ಲಿ ಅಧಿಕಾರಿಗಳಿಗೆ ನೀಡಿ" ಅಂತಾ

ಹೇಳಿದ್ದಕ್ಕೆ ಆರೋಪಿತನಾದ ನೀನು ಪಿರ್ಯಾದಿಯನ್ನು ಉದ್ದೇಶಿಸಿ ನವಾಯಿತಿ ಭಾಷೆಯಲ್ಲಿ "ತೂ ಚಾರಾಂಚೋ ಸೂನಾಪುತ್ ಮಾದರಚೋದ್" ಅಂತಾ ಅವಾಚ್ಯವಾಗಿ ಬೈದಿದ್ದರಿಂದ, ನೀನು ಭಾ.ದಂ.ಸಂ.ಕಲಂ 504 ರಡಿಯಲ್ಲಿ ಅಪರಾಧ ಮಾಡಿದ್ದೀಯಾ ಎಂದು ಆರೋಪಿಸಲಾಗಿರುತ್ತದೆ.

2 ನೇಯದಾಗಿ ಅದೇ ದಿನ, ಅದೇ ಸ್ಥಳ ಮತ್ತು ಸಮಯದಲ್ಲಿ ಆರೋಪಿತನಾದ ನೀನು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು, ಫಿರ್ಯಾದಿ ಪರಿಶಿಷ್ಟ ಜಾತಿಗೆ ಸೇರಿದವರೆಂದು ಗೊತ್ತಿದ್ದರೂ ಸಹ, ಸದರಿಯವರನ್ನು ಉದ್ದೇಶಿಸಿ, ನವಾಯಿತಿ ಭಾಷೆಯಲ್ಲಿ "ತೂ ಚಾರಾಂಚೋ ಸೂನಾಪುತ್ ಮಾದರಚೋದ್" ಅಂತಾ ಅವಾಚ್ಯವಾಗಿ ಬೈದು ಜಾತಿಯ ಮೇಲೆ ನಿಂದನೆ ಮಾಡಿದ್ದರಿಂದ, ನೀನು ಕಲಂ 3(1)(r), 3(1)(s) ಮತ್ತು ಕಲಂ 3(2)(Va) ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಅಧಿನಿಯಮ (ತಿದ್ದುಪಡಿ) 2015 ರನ್ವಯ ದಂಡನೀಯವಾದ ಅಪರಾಧವನ್ನು ಅಪರಾಧ ಮಾಡಿದ್ದೀಯಾ ಎಂದು ಆರೋಪಿಸಲಾಗಿರುತ್ತದೆ.

3 ನೇಯದಾಗಿ ಅದೇ ದಿನ, ಅದೇ ಸ್ಥಳ ಮತ್ತು ಸಮಯದಲ್ಲಿ ಆರೋಪಿತನಾದ ನೀನು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು, ಫಿರ್ಯಾದಿಯನ್ನು ಉದ್ದೇಶಿಸಿ "ತೂಕಾ ಮೈ ದರೋನಾಯಾ ಲಪಡೆ ಕರೆಯೋಂವ್" ಅಂತಾ ಜೀವ ಬೆದರಿಕೆ ಹಾಕಿದ್ದರಿಂದ, ನೀನು ಭಾ.ದಂ.ಸಂ.ಕಲಂ 506 ರಡಿಯಲ್ಲಿ ಅಪರಾಧ ಮಾಡಿದ್ದೀಯಾ ಎಂದು ಆರೋಪಿಸಲಾಗಿರುತ್ತದೆ.

ಕೊನೆಯದಾಗಿ ಅದೇ ದಿನ, ಅದೇ ಸ್ಥಳ ಮತ್ತು ಸಮಯದಲ್ಲಿ ಆರೋಪಿತನಾದ ನೀನು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು, ಆರೋಪಿತನಾದ ನೀನು ಫಿರ್ಯಾದಿಯನ್ನು ದೂಡಿ ಹಾಕಿ ಅವರಿಗೆ ನೋವು ಉಂಟು ಮಾಡಿದ್ದರಿಂದ, ನೀನು ಭಾ.ದಂ.ಸಂ.ಕಲಂ 323 ರಡಿಯಲ್ಲಿ ಅಪರಾಧ ಮಾಡಿದ್ದೀಯಾ ಎಂದು ಆರೋಪಿಸಲಾಗಿರುತ್ತದೆ.

KAUK010012642021

ಈ ಮೇಲ್ಕಂಡ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತವೆ.

ಆರೋಪಿತನಾದ ನೀನು ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ, ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

(ಗಣೇಶ ಬಿ.,)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಿನಾಂಕಃ 14-10-2022

ಉತ್ತರ ಕನ್ನಡ, ಕಾರವಾರ

KAUK010012642021

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ
**ಸ್ಪೇಶಲ್ ಕೇಸ ನಂ. 147/2021**

| | | |
|---|---|---|
| ಫಿರ್ಯಾದಿ | – ವಿರುದ್ಧ – | ಆರೋಪಿ/ಗಳು |
| ಭಟ್ಕಳ ಗ್ರಾಮೀಣ ಪೊಲೀಸ ಠಾಣೆ | | ಇರ್ಷಾದ ಮೊಹಿದ್ದೀನ್ ಸಿದ್ದಿಕ್ಕಾ @ ತುಕಡಾ ಇರ್ಷಾದ್ ತಂದೆ ಮೊಹಮ್ಮದ್ ಇಸ್ಮಾಯಿಲ್ |

**ದೋಷಾರೋಪಣೆ**

| | | |
|---|---|---|
| ಆರೋಪಿಯ ಹೆಸರು | – | ಇರ್ಷಾದ ಮೊಹಿದ್ದೀನ್ ಸಿದ್ದಿಕ್ಕಾ @ ತುಕಡಾ ಇರ್ಷಾದ್ |
| ತಂದೆಯ ಹೆಸರು | – | ಮೊಹಮ್ಮದ್ ಇಸ್ಮಾಯಿಲ್ |
| ವಯಸ್ಸು | – | 45 ವರ್ಷ |
| ಉದ್ಯೋಗ | – | ವ್ಯಾಪಾರ |
| ವಾಸ | – | ಸಾಃ ಕೆ.ಎಚ್.ಬಿ ಕಾಲೋನಿ, 4 ನೇ ಕ್ರಾಸ್, ಗಣೇಶ ಹಾರ್ಡವೇರ್ ಶೋಪ್ ಹಿಂಭಾಗ ಭಟ್ಕಳ ತಾಲೂಕು |

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ತಿಳಿಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 14–10–2022

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ